ಸುದ್ದಿ ಸಿಂಚನ

ಯುವ ಜನಾಂಗ ಪಾಶ್ಚಾತ್ಯ ಸಂಸ್ಕೃತಿಗೆ: ಖೇದಕರ

ಸವಣೂರ ತಾಲೂಕಿನ ತೆವರಮೆಳ್ಳಿಹಳ್ಳಿ ಗ್ರಾಮದ ಶ್ರೀ ಗಜಾನನೋತ್ಸವ ಆಚರಣೆಯಲ್ಲಿ ಮಂಗಳವಾರ ಏರ್ಪಡಿಸಿದ್ದ ಕನ್ನಡ ಚಲನಚಿತ್ರ ಗೀತೆಗಳ ರಸಮಂಜರಿ ಕಾರ್ಯಕ್ರಮದಲ್ಲಿ ಜೂನಿಯರ ರಾಜಕುಮಾರ ಅಶೋಕ ಬಸ್ತಿ ಅವರನ್ನು ಸನ್ಮಾನಿಸಲಾಯಿತು.

ಸವಣೂರು: ಸಿನಿಮಾ ಎಂಬುದು ಒಳ್ಳೆಯ ಸದಭಿರುಚಿಯ ಜೊತೆಗೆ ಮೌಲ್ಯಗಳನ್ನು ಎತ್ತಿಹಿಡಿಯುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶವನ್ನು ರವಾನಿಸುವಂತಹದು ದಾಗಿರಬೇಕು ಎಂದು ಜೂನಿಯರ್ ರಾಜಕುಮಾರ ಖ್ಯಾತಿಯ ರಂಗ ಕಲಾವಿದ ಅಶೋಕ ಬಸ್ತಿ ಅಭಿಪ್ರಾಯಪಟ್ಟರು. ತಾಲೂಕಿನ ತೆವರಮೆಳ್ಳಿಹಳ್ಳಿ ಗ್ರಾಮದ ಶ್ರೀ ಗಣೇಶ ಮಿತ್ರ ಮಂಡಳಿ ಆಯೋಜಿಸಲಾಗಿದ್ದ 39 ನೇ ವರುಷದ ಶ್ರೀ ಗಜಾನನೋತ್ಸವದ ಅಂಗವಾಗಿ ಮಂಗಳವಾರ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಇಂದಿನ ಯುವ ಜನಾಂಗದ ಹೆಚ್ಚು ಜನರು ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗುತ್ತಿದ್ದು, ನಮ್ಮ ಕಲೆ-ಸಂಗೀತದಿಂದ ವಿಮುಖರಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ನಮ್ಮ ಕನ್ನಡ ಚಲನಚಿತ್ರಗಳ ಹಳೆಯ ಹಾಡುಗಳಲ್ಲಿನ ರಾಗ ಸಂಯೋಜನೆ ಮತ್ತು ಸಾಹಿತ್ಯ ನಿಜಕ್ಕೂ ಅದ್ಭುತವಾಗಿದೆ. ಕನ್ನಡಿಗರಾದ ನಾವೆಲ್ಲ ಕನ್ನಡ ಸಿನೆಮಾಗಳನ್ನು ನೋಡುವ ಮೂಲಕ ಚಿತ್ರೋದ್ಯಮವನ್ನು ಪ್ರೋತ್ಸಾಯಿಸುವುದು ಇಂದಿನ ಅಗತ್ಯತೆಯಲ್ಲೊಂದಾಗಿದೆ ಎಂದರು.ಧಾರ್ಮಿಕ ಆಚರಣೆಗಳಲ್ಲಿ ನಮ್ಮ ಕಲಾಪ್ರಕಾರಗಳ ಪ್ರದರ್ಶನ ಅವಶ್ಯವಾಗಿದೆ ಎಂದರು.ಜಲ ಯೋಗಪಟು ರಾಜೂ ಪೇಟಕರ ಮಾತನಾಡಿ, ಚಲನಚಿತ್ರವೂ ಸೇರಿದಂತೆ ಸಾಮಾಜಿಕ ಜಾಲ ತಾಣ ಮಾಧ್ಯಮ ಎಂಬುದು ಮನುಷ್ಯನ ಬದುಕಿನ ಸರ್ವ ಸ್ತರಗಳ ಮೇಲೆ ಬಹುತೇಕ ಪ್ರಭಾವ ಬೀರುವಂತಹ ಒಂದು ಕ್ಷೇತ್ರವಾಗಿದ್ದು, ಮಾನವೀಯತೆಯುಕ್ತ ಆರೋಗ್ಯಕರ ಮಾಹಿತಿ, ಸಂದೇಶಗಳು ಇಲ್ಲಿ ಪ್ರಚುರಗೊಳ್ಳಬೇಕು ವಿನಹ ಅನಗತ್ಯ ಕ್ರೌರ್ಯ- ಹಿಂಸೆಗಳಲ್ಲ. ಈ ನಿಟ್ಟಿನಲ್ಲಿ ಸಾಹಿತಿಗಳು, ಬರಹಗಾರರು, ನಿರ್ದೇಶಕರು, ರೀಲ್ಸ್ ನಿರ್ವಾಹಕರು ಗಮನ ಹರಿಸುವ ಅವಶ್ಯಕತೆ ಇದೆ ಎಂದರು. ಹಿರಿಯ ನಾಗರಿಕ ರುದ್ರಪ್ಪ ಹಲಸೂರ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಶಿಕ್ಷಕ ಬಿ.ಎಲ್ .ಪೂಜಾರ, ಉದ್ಯಮಿ ಉಳವಪ್ಪ ಹಲಸೂರ, ಪ್ರಮುಖರಾದ ಸುರೇಶ ಹಲಸೂರ, ಯಲ್ಲಪ್ಪ ನಾಯಕನೂರ, ಗದಿಗೆಪ್ಪ ಹಲಸೂರ, ಎಚ್. ಆರ್.ನದಾಫ್, ಬಸವಣ್ಣೆಪ್ಪ ಹಲಸೂರ ಹಾಗೂ ಇತರರು ಪಾಲ್ಗೊಂಡಿದ್ದರು. ನಂತರ, ಕನ್ನಡ ಚಲನಚಿತ್ರ ಗೀತೆಗಳ ರಸಮಂಜರಿ ಕಾರ್ಯಕ್ರಮ ಜರುಗಿತು.

- ಇಂದಿನ ಯುವ ಜನಾಂಗದ ಹೆಚ್ಚು ಜನರು ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗುತ್ತಿದ್ದು ನಮ್ಮ ಕಲೆ-ಸಂಗೀತದಿಂದ ವಿಮುಖರಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಸ್ವಚ್ಛತೆಗೆ ಜನರ ಸಹಭಾಗಿತ್ವ ಬೇಕು

ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ರವೀಂದ್ರ

ಶಿಗ್ಗಾಂವಿಯಲ್ಲಿ ನಡೆದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಪುರಸಭೆ ಮುಖ್ಯಾಧಿಕಾರಿ ರವೀಂದ್ರ ಬಾಗಲಕೋಟಿ ಉದ್ಘಾಟಿಸಿ ಮಾತನಾಡಿದರು.

- **ಕನ್ನಡಪ್ರಭ ವಾರ್ತೆ** ಶಿಗ್ಗಾಂವಿ

ಪೌರಕಾರ್ಮಿಕರಿಗೆ ಆರೋಗ್ಯದ ಭದ್ರತೆಗೆ ಸರ್ಕಾರ ಜಾರಿಗೊಳಿಸಿರುವ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕೆಂದು ಪುರಸಭೆ ಮುಖ್ಯಾಧಿಕಾರಿ ರವೀಂದ್ರ ಬಾಗಲಕೋಟಿ ಹೇಳಿದರು.

ಪಟ್ಟಣದ ಪುರಸಭೆ ಸಭಾಭವನದಲ್ಲಿ ನಡೆದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪೌರಕಾರ್ಮಿಕರು ಉತ್ತಮ ಜೀವನ ನಡೆಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಪೌರಾಡಳಿತ ಇಲಾಖೆ ಹಮ್ಮಿಕೊಂಡಿದೆ ಎಂದರು.

ಸ್ವಚ್ಛತೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ ಪರಿಣಾಮಕಾರಿ ಪ್ರಭಾವ ಬೀರುತ್ತದೆ. ಅದ್ದರಿಂದ ಸಾರ್ವಜನಿಕರು ಸಹ ಸಹಕಾರ ನೀಡಬೇಕು. ಅನುಭವವೇ ಅಮೃತ, ಬದುಕಿನ ನಿರ್ವಹಣೆಯಲ್ಲಿ ಜೀವನ ಎಲ್ಲವನ್ನೂ ಕಲಿಸುತ್ತದೆ ಎಂದ ಅವರು, ಪೌರಕಾರ್ಮಿಕರ ಆರೋಗ್ಯ, ಸೌಲಭ್ಯ ಮತ್ತು ಕಾಯಮಾತಿ ಸೇರಿದಂತೆ ವಿವಿಧ ಬೇಡಿಕೆಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಸಿ ಪರಿಹಾರ ಕಲ್ಪಿಸಲು ಈ ಕಾರ್ಯಕ್ರಮ ವೇದಿಕೆಯಾಗಿದೆ ಎಂದರು.

ಪುರಸಭೆ ವ್ಯವಸ್ಥಾಪಕಿ ಮಂಗಳಗೌರಿ ಪಾಟೀಲ ಪ್ರಾಸ್ತಾವಿಕ ಮಾತನಾಡಿ, ಪೌರಕಾರ್ಮಿಕರ ದಿನಾಚರಣೆ ಮಾಡುವ ಮೂಲಕ ಅವರಿಗೆ ಗೌರವ ನೀಡಿದರೆ ಸಾಲದು, ನಿಗದಿತ ಅವಧಿಯಲ್ಲಿ ಸರ್ಕಾರದ ಸೌಲಭ್ಯಗಳನ್ನ ಅವರಿಗೆ ತಲುಪಿಸಿದಾಗ ಮಾತ್ರ ಅವರಿಗೆ ಗೌರವ ಸಲ್ಲಿಸಿದಂತೆ ಎಂದು ಹೇಳಿದರು.

> ಪೌರಕಾರ್ಮಿಕರ ದಿನಾಚರಣೆ ಮಾಡುವ ಮೂಲಕ ಅವರಿಗೆ ಗೌರವ ನೀಡಿದರೆ ಸಾಲದು, ನಿಗದಿತ ಅವಧಿಯಲ್ಲಿ ಸರ್ಕಾರದ ಸೌಲಭ್ಯಗಳನ್ನ ಅವರಿಗೆ ತಲುಪಿಸಿದಾಗ ಮಾತ್ರ ಅವರಿಗೆ ಗೌರವ ಸಲ್ಲಿಸಿದಂತೆ.
>
> - **ಮಂಗಳಗೌರಿ ಪಾಟೀಲ** ಪುರಸಭೆ ವ್ಯವಸ್ಥಾಪಕಿ

ಮುಖಂಡ ಸುರೇಶ ಹರಿಜನ ಮಾತನಾಡಿ, ಪೌರಕಾರ್ಮಿಕರ ಮೇಲೆ ಕೆಲ ವೇಳೆ ದೌರ್ಜನ್ಯಗಳು ನಡೆದ ಪ್ರಕರಣಗಳು ಜರುಗಿವೆ. ಅದು ಆಗಬಾರದು, ಪಟ್ಟಣದ ಸುರಕ್ಷತೆಯ ಜತೆಗೆ ತಮ್ಮ ಆರೋಗ್ಯ ಬಗ್ಗೆ ಕಾಳಜಿ ವಹಿಸಬೇಕು ಎಂದರು.

ಪೌರಕಾರ್ಮಿಕರ ಸಂಘದ ಉಪಾಧ್ಯಕ್ಷ ಶಾಂತಪ್ಪ ದೊಡ್ಡಮನಿ ಮಾತನಾಡಿ, ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ನೀಡಿದ ಸುರಕ್ಷತೆಯ ಸಲಕರಣೆಗಳನ್ನು ಧರಿಸುತ್ತಿಲ್ಲ, ಸಲಕರಣೆಗಳನ್ನು ತಪ್ಪದೇ ಬಳಸಿ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪೌರಕಾರ್ಮಿಕರಿಗೆ ಸನ್ಮಾನ ಹಾಗೂ ವಿವಿಧ ಕ್ರೀಡೆಗಳಲ್ಲಿ ಗೆಲುವು ಸಾಧಿಸಿದ ಪೌರಕಾರ್ಮಿಕ ಕ್ರೀಡಾಪಟುಗಳಿಗೆ ಪ್ರಶಸ್ತಿ ವಿತರಿಸಲಾಯಿತು. ಲಕ್ಷ್ಮಣ ಪೂಜಾರ ಪ್ರಾರ್ಥಿಸಿದರೆ, ಸಿಬ್ಬಂದಿ ಕಾಂತೇಶ ಮರಾಠೆ ಕಾರ್ಯಕ್ರಮ ನಿರೂಪಿಸಿದರು.

ಪುರಸಭೆಯ ಶಿವಕುಮಾರ ಹಲಗಣ್ಣವರ, ಪೌರನೌಕರರ ಸಂಘದ ಕಾರ್ಯದರ್ಶಿ ಯಲ್ಲಪ್ಪ ಹಾದಿಮನಿ, ಮಂಜುನಾಥ ಕಟ್ಟಿಮನಿ, ಲಕ್ಷ್ಮವ್ವ ಬಳ್ಳಾರಿ, ಭಾರತಿ ಬಳ್ಳಾರಿ ಸೇರಿದಂತೆ ಪುರಸಭೆ ಸಿಬ್ಬಂದಿ ಹಾಗೂ ಪೌರಕಾರ್ಮಿಕರು ಇದ್ದರು.

ಕಾಯಕಲ್ಪ ಉಪಕ್ರಮದಿಂದ ಆಸ್ಪತ್ರೆ ಗುಣಮಟ್ಟ ಸುಧಾರಣೆ: ನಾಗರಾಜ

ರಾಣೆಬೆನ್ನೂರು ಸಾರ್ವಜನಿಕ ಆಸ್ಪತ್ರೆಗೆ ಡಿಎಚ್‌ಒ ಭೇಟಿ, ಪರಿಶೀಲನೆ

ರಾಣೆಬೆನ್ನೂರು ನಗರದ ಹಲಗೇರಿ ರಸ್ತೆ ಸಾರ್ವಜನಿಕ ಆಸ್ಪತ್ರೆಗೆ ಹಾವೇರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಾಗರಾಜ ಭೇಟಿ ನೀಡಿ ಪರಿಶೀಲನೆ ನಡೆಸಿದರು.

- **ಕನ್ನಡಪ್ರಭ ವಾರ್ತೆ** ರಾಣೆಬೆನ್ನೂರು

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಜಾರಿಗೆ ತಂದಿರುವ ಕಾಯಕಲ್ಪ ಉಪಕ್ರಮವು ಸರ್ಕಾರಿ ಆಸ್ಪತ್ರೆಗಳ ಗುಣಮಟ್ಟ ಸುಧಾರಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ ಹೇಳಿದರು.

ನಗರದ ಹಲಗೇರಿ ರಸ್ತೆಯ ಸಾರ್ವಜನಿಕ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿ ಆಸ್ಪತ್ರೆಯ ವಿವಿಧ ವಿಭಾಗಗಳನ್ನು ಪರಿಶೀಲಿಸಿ ಮಾತನಾಡಿದ ಅವರು, ಆಸ್ಪತ್ರೆಯಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯ ಕಾಪಾಡುವ ನಿಟ್ಟಿನಲ್ಲಿ ವೈದ್ಯರು, ಶುಶ್ರೂಷಕರು, ಸಿಬ್ಬಂದಿ ಹಾಗೂ ಪೌರಕಾರ್ಮಿಕರು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ಜತೆಗೆ ಆಸ್ಪತ್ರೆಯ ವಾತಾವರಣವನ್ನು ಸ್ವಚ್ಛ ಹಾಗೂ ಸುರಕ್ಷಿತವಾಗಿಡುವುದು ಅತ್ಯಂತ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಆಸ್ಪತ್ರೆಯ ವಿವಿಧ ವಿಭಾಗಗಳಲ್ಲಿ ಸ್ವಚ್ಛತಾ ಕಾರ್ಯಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದರು.

ಆಸ್ಪತ್ರೆಯಲ್ಲಿ ಉತ್ಪತ್ತಿಯಾಗುವ ಜೈವಿಕ ವೈದ್ಯಕೀಯ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಂಗಡಿಸಿ, ಸಂಗ್ರಹಿಸಿ ಹಾಗೂ ನಿಯಮಾನುಸಾರ ವಿಲೇವಾರಿ ಮಾಡುವುದು ಸೋಂಕು ನಿಯಂತ್ರಣದ ಪ್ರಮುಖ ಭಾಗವಾಗಿದೆ. ಇದರಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯವಾಗದಂತೆ ಸಿಬ್ಬಂದಿ ಎಚ್ಚರಿಕೆ ವಹಿಸಬೇಕು. ಆಸ್ಪತ್ರೆಯ ಸುತ್ತಮುತ್ತಲಿನ ಪ್ರದೇಶ, ವಾರ್ಡ್, ಹೊರರೋಗಿಗಳ ವಿಭಾಗ, ಶೌಚಾಲಯ ಹಾಗೂ ರೋಗಿಗಳು ಮತ್ತು ಸಾರ್ವಜನಿಕರು ಸಂಚರಿಸುವ ಸ್ಥಳಗಳಲ್ಲಿ ನಿರಂತರ ಸ್ವಚ್ಛತೆ ಕಾಪಾಡಬೇಕು ಎಂದು ಸೂಚಿಸಿದರು.

ಜನಸಂಖ್ಯೆ ಹಾಗೂ ಆಸ್ಪತ್ರೆಗೆ ಆಗಮಿಸುವ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಇನ್ನಷ್ಟು ವೈದ್ಯಕೀಯ ಸೌಲಭ್ಯ, ಅಗತ್ಯ ಉಪಕರಣ ಹಾಗೂ ಸಿಬ್ಬಂದಿ ಬೇಕಾಗಿರುವುದು ಗಮನಕ್ಕೆ ಬಂದಿದೆ. ಈ ಕುರಿತು ಸರ್ಕಾರದ ಗಮನಕ್ಕೆ ತಂದು ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕ್ರಮಕ್ಕೆಗೊಳ್ಳಲಾಗುವುದು ಎಂದರು.

ಈ ವೇಳೆ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿದ ಅವರು, ಸ್ವಚ್ಛತೆ, ಜೈವಿಕ ತ್ಯಾಜ್ಯ ನಿರ್ವಹಣೆ, ಶೌಚಾಲಯ, ಹೊರರೋಗಿಗಳ ವಿಭಾಗ ಸೇರಿದಂತೆ ವಿವಿಧ ವ್ಯವಸ್ಥೆಗಳನ್ನು ಪರಿಶೀಲಿಸಿ, ಅಗತ್ಯ ಸಲಹೆ-ಸೂಚನೆ ನೀಡಿದರು.

ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ರಾಜು ಶಿರೂರ, ಆಡಳಿತಾಧಿಕಾರಿ ಸಾಲಿಮಠ, ಡಾ. ಜ್ಞಾನೇಶ್ವರ, ಡಾ. ಮಂಜುನಾಥ, ಡಾ. ಹರೀಶ, ಡಾ. ಪರಮೇಶ್ವರಪ್ಪ ಹಾಗೂ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.

ವಿಸರ್ಜನೆ ಮಾರ್ಗದ ಕುರಿತು ಪುನಃ ಪರಿಶೀಲನೆಗೆ ಆಗ್ರಹ

ಸವಣೂರು ಉಪವಿಭಾಗಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆಯಿಂದ ವಿಶೇಷ ಶಾಂತಿ ಸಭೆ ಜರುಗಿತು.

- **ಕನ್ನಡಪ್ರಭ ವಾರ್ತೆ** ಸವಣೂರು

ಪಟ್ಟಣದ ಸಿಂಪಿಗಲ್ಲಿ ಗಣೇಶ ವಿಸರ್ಜನೆಗೆ ಸಂಬಂಧಿಸಿದಂತೆ ತಾಲೂಕು ಗಣೇಶೋತ್ಸವ ಸಮಿತಿ ಹಾಗೂ ಸಾರ್ವಜನಿಕರು ಗಣೇಶ ವಿಸರ್ಜನಾ ಮಾರ್ಗದ ಕುರಿತು ನೀಡಲಾಗಿದ್ದ ಮನವಿ ಸ್ವೀಕರಿಸಿದ್ದ ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆಯಿಂದ ವಿಶೇಷ ಶಾಂತಿ ಸಭೆ ನಡೆಯಿತು.

ಸಭೆಯಲ್ಲಿ ಪುನಃ ತಾಲೂಕು ಗಣೇಶ ಸಮಿತಿ, ಸಾರ್ವಜನಿಕರಿಂದ ವಿಸರ್ಜನೆ ಮಾರ್ಗದ ಕುರಿತು ಪುನಃ ಪರಿಶೀಲನೆ ಮಾಡಿ ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸುವಂತೆ ಕೋರಿ ಅಭಿಪ್ರಾಯ ಕೇಳಲಾಯಿತು.

ಈ ವೇಳೆ ಮಾತನಾಡಿದ ಮಹೇಶ ಸಾಲಿಮಠ, ಸವಣೂರಿನಲ್ಲಿ ಅಲ್ಪಸಂಖ್ಯಾತರಾದ ಹಿಂದೂಗಳ ಮೇಲೆ ಅಹಿತಕರ ಘಟನೆಗಳು ಸಂಭವಿಸಿದರೆ ಅಧಿಕಾರಿಗಳೇ ಹೊಣೆ ಹೋರಬೇಕಾಗುತ್ತದೆ. ನವಾಬರ ಕಾಲದಿಂದಲ್ಲೂ ಇಂದಿನವರೆಗೂ ಹಿಂದೂ-ಮುಸ್ಲಿಂ ಭಾಂದವರು ಅತ್ಯಂತ ಸಹೋದರತೆಯಿಂದ ಬಾಳ್ವೆ ಮಾಡಿಕೊಂಡು ಬಂದ ಪ್ರತೀತಿ ಇದೆ ಆದರೆ ಪೊಲೀಸ ಅಧಿಕಾರಿಗಳು ಇಂದು ಅದನ್ನು ಒಡೆದು ಆಳ್ವಿಕೆ ಮಾಡುತ್ತಿರುವದು ನೋವಿನ ಸಂಗತಿಯಾಗಿದೆ. ಈ ಹಿಂದಿನಿಂದಲ್ಲೂ ರಾಜಬೀದಿಯಲ್ಲಿ ಸಾಂಗವಾಗಿ ಗಣೇಶ ವಿಸರ್ಜನೆ ಮಾಡಲಾಗುತ್ತಿತ್ತು ಆದರೆ ಕೆಲ ವರ್ಷಗಳ ಹಿಂದೆ ಡಿಜೆ ಅಬ್ಬರ ಇರುವುದರಿಂದ ಬೇರೆ ಮಾರ್ಗದಲ್ಲಿ ಸಾಗುತ್ತಿತ್ತು. ಈ ಬಾರಿ ಡಿಜೆ ಅಬ್ಬರ ಇಲ್ಲದೆ ಇರುವುದರಿಂದ ಭಜನೆ ಕೀರ್ತನೆಯ ಮೂಲಕ ರಾಜಬೀದಿಯ ಮೂಲಕ ಗಣೇಶ ವಿಸರ್ಜನೆ ಮಾಡಲಾಗುವದು. ಅದಕ್ಕೆ ನಿಮ್ಮ ವಿರೋಧವೇಕೆ ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

ರವಿವಾರ ಪೊಲೀಸ್ ಅಧಿಕಾರಿಗಳು ಸೂಚಿಸಿದಂತೆ ಅಂದು ನಿರಾಕರಿಸಿದ ಮಾರ್ಗದಲ್ಲೇ ಮೆರವಣಿಗೆಗೆ ಅವಕಾಶ ನೀಡುವಂತೆ ಕೋರಿ ಮಂಗಳವಾರ ಮನವಿ ಸಲ್ಲಿಸಲಾಗಿದೆ.

ಪಟ್ಟಣದಲ್ಲಿ ಪ್ರತಿಷ್ಠಾಪನೆ ಮಾಡಿರುವ ಉಳಿದ ಎಲ್ಲ ಗಣೇಶ ವಿಸರ್ಜನೆಯನ್ನು ಅಧಿಕಾರಿಗಳ ನಿರ್ದೇಶನದಂತೆ ಮಾರ್ಗ ಸೂಚಿ ಅನುಸರಿಸಲು ತಾಲೂಕು ಗಣೇಶ ಉತ್ಸವ ಸಮಿತಿ ಸಹಕರಿಸಲಿದೆ. ದಯವಿಟ್ಟು ಸಿಂಪಿಗಲ್ಲಿ ಗಣೇಶನನ್ನು ರಾಜಬೀದಿ ಮಾರ್ಗದಲ್ಲೇ ಮೆರವಣಿಗೆ ಸಹಿತ ವಿಸರ್ಜಿಸಲು ಅನುಮತಿ ನೀಡುವಂತೆ ವಿನಂತಿಸಿದರು.

ಒಂದೊಮ್ಮೆ ಅನುಮತಿ ನೀಡದೇ ಇದ್ದರೂ ಅದೇ ಮಾರ್ಗದಲ್ಲೇ ಸಾಗಿ ಗಣೇಶ ವಿಸರ್ಜಿಸಲಾಗುವುದು. ಅಂದು ರಾಜಕೀಯ ಮುಖಂಡರು, ಮಠಾಧೀಶರು, ಸಾರ್ವಜನಿಕರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ರಕ್ಷಣೆ ನೀಡುವುದು ತಾಲೂಕಾಡಳಿತ ಮತ್ತು ಪೊಲೀಸ್ ಇಲಾಖೆ ಜವಾಬ್ದಾರಿ ಎಂದರು.

ಸಲಹೆ-ಸೂಚನೆ ಆಲಿಸಿದ ಉಪವಿಭಾಗಾಧಿಕಾರಿ ಸಮೀರ ಪ್ರಕಾಶ್ ಕೊಡೆ ಮಾತನಾಡಿ, ರವಿವಾರ ಎಸ್ಪಿ ಅವರು ತಿಳಿಸಿದ ನಿರ್ಧಾರವನ್ನೇ ತಿಳಿಸಿದರು. ಗಣೇಶ ಉತ್ಸವ ಸಮಿತಿ ಮತ್ತು ಸಾರ್ವಜನಿಕರು ಏನೂ ಮಾತನಾಡದೇ ಸಭೆ ಮುಕ್ತಾಯಗೊಳಿಸಿ ಹೊರನಡೆದರು.

ತಹಸೀಲ್ದಾರ್ ರವಿಕುಮಾರ್ ಕೊರವರ, ಹಾವೇರಿ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿ ಎಲ್.ವೈ. ಶಿರಕೋಳ, ಡಿವೈಎಸ್ಪಿ ಗುರುಶಾಂತಪ್ಪಾ ಕೆ.ವಿ., ಮುಖಂಡರಾದ ಅರುಣ ಬಗರೆ, ಮಹೇಶ ಮುದಗಲ, ಗಂಗಾಧರ ಬಾಣದ, ನಾಗೇಶ ಗಿತ್ತೆ, ಧರಿಯಪ್ಪಗೌಡ ಪಾಟೀಲ, ಪಾಂಡುರಂಗ ಮಹೇಂದ್ರಕರ, ಜಯತೀರ್ಥ ದೇಶಪಾಂಡೆ, ಮಹೇಶ ಮುದಗಲ್, ಶ್ರೀನಿವಾಸ ಗಿತ್ತೆ, ಗಜಾನನ ರಾತಿನಕರ, ಪ್ರವೀಣ ಬಾಲೇಹೊಸೂರ, ವಿನಾಯಕ ಕುಲಕರ್ಣಿ, ಸಮೀಶ ಕಮ್ಮಾರಕೇರಿ, ಮಹೇಶ ಜಡಿ, ಶಂಕರ ಪಾಟೀಲ, ಗಿರೀಶ ಬಗರೆ, ಆನಂದ ವಡಕಮ್ಮನವರ, ಲಕ್ಷ್ಮಣ ಕನವಳ್ಳಿ, ಕಟ್ಟೆಪ್ಪ ಆಲ್ದೂರ, ಶ್ರೀಕಾಂತ ಲಕ್ಷ್ಮೇಶ್ವರ, ರಂಗಪ್ಪ ಮೈಲಮ್ಮನವರ, ಹನುಮಂತಗೌಡ ಮುದಿಗೌಡ್ರ ಹಾಗೂ ಇತರರಿದ್ದರು.

ಸನ್ಮಾನ...

ಶಿಗ್ಗಾಂವಿಯಲ್ಲಿ ನಡೆದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಕಾರ್ಮಿಕ ಕಾಯ್ದೆ ಉಲ್ಲಂಘನೆ : ಗುತ್ತಿಗೆದಾರನ ವಿರುದ್ಧ ಕ್ರಮಕ್ಕೆ ಆಗ್ರಹ

ಗುತ್ತಿಗೆದಾರನ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಉಗ್ರಾಣ ನಿಗಮದ ಕಾರ್ಮಿಕರು ಕಾರ್ಮಿಕ ನಿರೀಕ್ಷಕ ದೇವೇಂದ್ರಪ್ಪ ನಾಟಿಕರ್ ಹಾಗೂ ಉಗ್ರಾಣ ವ್ಯವಸ್ಥಾಪಕ ಎ.ಎಂ.ಪಾಟೀಲ ಅವರಿಗೆ ಮನವಿ ಸಲ್ಲಿಸಿದರು.

- **ಕನ್ನಡಪ್ರಭ ವಾರ್ತೆ** ರಾಣೆಬೆನ್ನೂರು

ತಾಲೂಕಿನ ಹುಲಿಹಳ್ಳಿ ಗ್ರಾಮದ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಗೋದಾಮಿನಲ್ಲಿ ಕಾರ್ಮಿಕ ಕಾಯ್ದೆ ಉಲ್ಲಂಘನೆ ಮಾಡುತ್ತಿರುವ ಗುತ್ತಿಗೆದಾರನ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಉಗ್ರಾಣ ನಿಗಮದ ಕಾರ್ಮಿಕರು ಬುಧವಾರ ಕಾರ್ಮಿಕ ನಿರೀಕ್ಷಕ ದೇವೇಂದ್ರಪ್ಪ ನಾಟಿಕರ್ ಹಾಗೂ ಉಗ್ರಾಣ ವ್ಯವಸ್ಥಾಪಕ ಎ.ಎಂ.ಪಾಟೀಲ ಅವರಿಗೆ ಮನವಿ ಸಲ್ಲಿಸಿದರು. ಈ ಸಮಯದಲ್ಲಿ ರೈತ ಮುಖಂಡ ರವೀಂದ್ರಗೌಡ ಪಾಟೀಲ ಮಾತನಾಡಿ, ಇಲ್ಲಿನ ಗೋದಾಮಿನಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರು 50 ಕೆಜಿ ಅಕ್ಕಿ ಮೂಟೆಗಳನ್ನ ಲೋಡ್ ಮತ್ತು ಅನ್ಲೋಡ್ ಮಾಡುತ್ತಾರೆ. ಇಂತಹ ಕೆಲಸ ಮಾಡುವ ಕಾರ್ಮಿಕರು ದೈಹಿಕವಾಗಿ ವಿಶ್ರಾಂತಿ ಪಡೆಯಲು ಮತ್ತು ಚೇತರಿಸಿಕೊಳ್ಳಲು ಸರ್ಕಾರವೇ ವಾರಕ್ಕೊಂದು ಕಡ್ಡಾಯ ರಜೆ ನೀಡಲು ಆದೇಶ ಹೊರಡಿಸಿದೆ. ಆದರೆ ಗುತ್ತಿಗೆದಾರ ರಜೆ ನೀಡದೇ ಕೆಲಸ ಮಾಡಿಸುತ್ತಾನೆ. ಇದನ್ನು ವಿರೋಧಿಸಿದರೆ ಕಾರ್ಮಿಕರಿಗೆ ಕೆಲಸ ಬಿಡಿಸುವ ಬೆದರಿಕೆ ಹಾಕುತ್ತಾರೆ. ಕೆಲಸ ಕಳೆದುಕೊಳ್ಳುವ ಭೀತಿಯಿಂದ ಕಾರ್ಮಿಕರು ಅನಿವಾರ್ಯವಾಗಿ ರಜೆಯಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಉಗ್ರಾಣದಲ್ಲಿ 60 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಇದರಲ್ಲಿ ಕೇವಲ 25 ಜನರಿಗೆ ಮಾತ್ರ ಪಿಎಫ್, ಇಎಸ್ಐ ಕಟ್ಟುತ್ತಾನೆ. ಇನ್ನುಳಿದ ಕಾರ್ಮಿಕರಿಗೆ ಇಲ್ಲಸಲ್ಲದ ಕಾರಣಗಳನ್ನು ಹೇಳಿ ಅವುಗಳನ್ನು ಕಟ್ಟುತ್ತಿಲ್ಲ. ಮೂಟೆಗಳನ್ನು ಹೊತ್ತುಕೊಂಡು ಕೆಲಸ ಮಾಡುವ ಸಂದರ್ಭದಲ್ಲಿ ಏನಾದರೂ ಅಪಘಾತಗಳು ಸಂಭವಿಸಿದರೆ ಆ ಕಾರ್ಮಿಕನ ಕುಟುಂಬಗಳಿಗೆ ಯಾವುದೇ ಭದ್ರತೆಯಿಲ್ಲವಾಗಿದೆ. ಕಾರ್ಮಿಕರ ಸುರಕ್ಷತೆ, ಮೂಲಭೂತ ಸೌಕರ್ಯ, ಆರೋಗ್ಯ ಮುಂತಾದ ಸೌಲಭ್ಯಗಳ ಬಗ್ಗೆ ಹಾಗೂ ಉಗ್ರಾಣದಲ್ಲಿ ಕೆಲಸ ಮಾಡುವ ಹಮಾಲಿ ಕಾರ್ಮಿಕರ ಕುಂದು ಕೊರತೆಗಳ ಮಾಹಿತಿ ಪಡೆಯಲು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಗಮನ ಹರಿಸುತ್ತಿಲ್ಲ. ಕಾರ್ಮಿಕ ಇಲಾಖೆಯ ಬೇಜವಾಬ್ದಾರಿ ತನ ದಿಂದ ಇಂತಹ ಗುತ್ತಿಗೆದಾರರು ಕಾರ್ಮಿಕರನ್ನು ಜೀತದಾಳುಗಳಂತೆ ಕಾಣುತ್ತಿದ್ದಾರೆ. ಉಗ್ರಾಣ ನಿಗಮದಲ್ಲಿ ಕೆಲಸ ಮಾಡುತ್ತಿರುವ ಹಮಾಲಿ ಕಾರ್ಮಿಕರ ಮೇಲಾಗುತ್ತಿರುವ ಶೋಷಣೆಯ ಬಗ್ಗೆ ರಾಜ್ಯಮಟ್ಟದ ಕಾರ್ಮಿಕ ಇಲಾಖೆಯಿಂದ ತನಿಖೆಯಾಗಬೇಕೆಂದು ಆಗ್ರಹಿಸಿದರು. ಜಗದೀಶ್ ಕೆರೋಡಿ, ಹನುಮಂತಪ್ಪ ಹಲವಾಗಲ, ಮಲ್ಲಪ್ಪ ಕಂಬಳಿ ಮಾಲತೇಶ್ ಹಲಗೇರಿ, ಕೆಂಚಪ್ಪ ಬುಳ್ಳಪ್ಪನವರ, ವಿರುಪಾಕ್ಷಪ್ಪ ಕಜ್ಜರಿ, ಮಹೇಶ್ ಕೋಣನವರ, ನಾಗಪ್ಪ ಮೆಡ್ಲೇರಿ, ನಾಗರಾಜ ಜ್ಯೋತಿ, ಮಂಜು ಜ್ಯೋತಿ. ಕಾಂತೇಶ್ ಕಂಬಳಿ, ನಾಗರಾಜ ವಡ್ಡರ. ಬಸವರಾಜ ಹೆಬ್ಬಾಳ ಇದ್ದರು.

ತಕ್ಷಣ ಮಧ್ಯಂತರ ಬೆಳೆ ವಿಮೆ ಪರಿಹಾರ ನೀಡಿ

ಶಿಗ್ಗಾಂವಿ: ತಾಲೂಕಿನಲ್ಲಿ ಬರ ಪರಿಸ್ಥಿತಿ ತೀವ್ರವಾಗಿದ್ದರೂ ಸರ್ಕಾರ ಅರೆ ಬರಗಾಲ ಎಂದು ಘೋಷಿಸಿರುವುದು ಸರಿಯಲ್ಲ, ಬರಗಾಲದ ಮಾನದಂಡಗಳೇನು ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ರೈತ ಮುಖಂಡ ಶಶಿಧರ ಹೊನ್ನಣ್ಣವರ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ತಾಲೂಕಿನಲ್ಲಿ ಶೇ. 70ಕ್ಕೂ ಹೆಚ್ಚು ಪ್ರದೇಶದಲ್ಲಿ ಬರ ಪರಿಸ್ಥಿತಿ ನಿರ್ಮಾಣವಾಗಿದ್ದು, ಅಧಿಕಾರಿಗಳು ಸಮರ್ಪಕವಾಗಿ ಸಮೀಕ್ಷೆ ನಡೆಸದೆ ಅರೆ ಬರಗಾಲ ಎಂದು ಘೋಷಿಸಿರುವುದು ಖಂಡನೀಯ. ಆಗಸ್ಟ್‌ನಲ್ಲಿ ವಾಡಿಕೆಗಿಂತ ಶೇ.34ರಷ್ಟು ಹಾಗೂ ಸೆಪ್ಟೆಂಬರ್‌ನಲ್ಲಿ ಶೇ.3ರಷ್ಟು ಮಳೆ ಕೊರತೆಯಾಗಿದ್ದು, ಇದರಿಂದ ರೈತರು ಬೆಳೆದ ಬೆಳೆ ಸಂಪೂರ್ಣವಾಗಿ ನಾಶವಾಗಿವೆ ಎಂದು ತಿಳಿಸಿದ್ದಾರೆ. ಅಕ್ಟೋಬರ್‌ನಲ್ಲಿ ಸುರಿದ ಅಲ್ಪ ಮಳೆಯನ್ನು ಆಧಾರವಾಗಿಟ್ಟುಕೊಂಡು ಅರೆ ಬರಗಾಲ ಎಂದು ಘೋಷಿಸಿರುವುದು ರೈತರ ಹಿತಕ್ಕೆ ವಿರುದ್ಧವಾಗಿದೆ. ಆದ್ದರಿಂದ ತಾಲೂಕನ್ನು ಸಂಪೂರ್ಣ ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕು ಎಂದು ಒತ್ತಾಯಿಸಿದರು. ಬರದಿಂದ ಹಾನಿಗೊಳಗಾದ ಬೆಳೆಗಳಿಗೆ ಶೇ. 25ರಷ್ಟು ಮಧ್ಯಂತರ ಬೆಳೆ ವಿಮೆ ಪರಿಹಾರವನ್ನು ತಕ್ಷಣ ಜಾರಿಗೊಳಿಸಬೇಕು. ರೈತರ ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ವಿದ್ಯುತ್ ಪೂರೈಕೆಯಲ್ಲಿಯೂ ವ್ಯತ್ಯಯವಾಗುತ್ತಿದ್ದು, ಏಳು ಗಂಟೆ ಬದಲಿಗೆ ಕೇವಲ ಐದು ಗಂಟೆ ವಿದ್ಯುತ್ ನೀಡಲಾಗುತ್ತಿದೆ. ನಿಗದಿಯಂತೆ ಏಳು ಗಂಟೆಗಳ ಕಾಲ ಸಮರ್ಪಕ ವಿದ್ಯುತ್ ಪೂರೈಸಬೇಕು ಎಂದು ಆಗ್ರಹಿಸಿದರು. ಮಧ್ಯಂತರ ಬೆಳೆ ವಿಮೆ ಪರಿಹಾರ ಜಾರಿಗೊಳಿಸದಿದ್ದಲ್ಲಿ ರೈತರನ್ನು ಸಂಘಟಿಸಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದ್ದಾರೆ.

CHANGE OF NAME

I, **Jahanara Khazi D/o Shikandarsaheb (old name)** changed my name as **Jahanara Inamdar W/o Shamshuddin Inamdar (new name)** Resident of 899/1, Mruthyunjaya Nagar 1 Cross, Near Noorani Masjid, Ranebennur-581115 Dist. Haveri, Karnataka. vide affidavit dated: 21-09-2026 sworn before Notary Ekanta Mudigoudar at Ranebennur

CHANGE OF NAME

I, **HEENABANU NOORAHMED MASHALJI, (old name)** changed my name as **HEENABANU DODDAMANI (new name)** Resident of ISLAMPUR ONI RANEBENNUR Taluk- RANEBENNUR, Dist- HAVERI, State: Karanataka, -581115 India. vide affidavit dated: 21-09-2026 sworn before Notary Kumar D Madiwalar at Ranebennur

बैंक ऑफ़ बड़ौदा
Bank of Baroda

ಹುಲ್ಲೂರು ಶಾಖೆ

ಹೊಸ ಬಸ್‌ಸ್ಟಾಂಡ್ ಹತ್ತಿರ, ಹುಲ್ಲೂರು, ತಾಲ್ಲೂಕು ಶಿಗ್ಗಾಂವ್,
ಜಿಲ್ಲೆ ಹಾವೇರಿ-5811126, ಕರ್ನಾಟಕ, ಇಂಡಿಯಾ.
Phone:6355924691. Email : vjhulg@bankofbaroda.co.in

ಇ-ಹರಾಜು ಮಾರಾಟ ಸೂಚನೆ
ಅನುಬಂಧ- IV-A [ನಿಯಮ 6 (2) ಮತ್ತು ನಿಬಂಧನೆ 8 (6)]

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6)ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರರು(ರಿ)ಗೆ/ಅಡಮಾನದಾರರು(ರಿ)ಗೆ ಹಾಗೂ ಜಾಮೀನುದಾರರು(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಚರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್)ರಿಗೆ ಅಡಮಾನವಾಗಿದ್ದು/ ಅವರ ಭಾರ್ಜಗಳಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಬಾಕಿಯ(ಗಳ) ಬಾಕಿ ವಸೂಲಾತಿಗಾಗಿ **ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ** ಅವುಗಳನ್ನು ಆಧಾರದ । ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರರ(ರ)/ಅಡಮಾನದಾರರ(ರ)/ಜಾಮೀನುದಾರರ(ರ) ಭದ್ರತಾ ಆಸ್ತಿ(ಗಳು)/ಬಾಕಿ/ಮೀಸಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳು ಕೆಳಕಂಡಂತಿವೆ:

ಕ್ರ ಸಂ	ಸಾಲಗಾರ/ರು / ಜಾಮೀನುದಾರರು / ಅಡಮಾನದಾರರ ಹೆಸರು ಮತ್ತು ವಿಳಾಸ	ಋಣಭಾರಗಳನ್ನು ಹೊಂದಿರುವ ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆಯನ್ನು ನೀಡಿ, ಯಾವುದಾದರೂ ಇದ್ದರೆ (ಅಡಮಾನ ಇಟ್ಟವರು: ಶ್ರೀ ಶೇಖಪ್ಪ ವೆಂಕಪ್ಪ ಹಾಂಡೇಲ್)	21.09.2026 ರವರೆಗೆ ಬಡ್ಡಿಯೊಂದಿಗೆ ಬಾಕಿ ಇರುವ ಮೊತ್ತ	ಇ-ಹರಾಜಿನ ದಿನಾಂಕ ಮತ್ತು ಸಮಯ	1.ಆಸ್ತಿಯ ಮೀಸಲು ಬೆಲೆ 2.ಇಎಂಡಿ 3.ಕನಿಷ್ಠ ಬಿಡ್ಡಿನ ಹೆಚ್ಚಳದ ಮೊತ್ತ	ಆಸ್ತಿಯ ಸ್ವರೂಪ (ರಚನಾತ್ಮಕ / ಭೌತಿಕ)	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
01	**ಸಾಲಗಾರರು:** 1.ರುದ್ರಪ್ಪ ಪಕ್ಕೀರಪ್ಪ ಶಿರಗುಪ್ಪಿ, 2.ಮಂಜುನಾಥ್ ರುದ್ರಪ್ಪ ಶಿರಗುಪ್ಪಿ ವಾಸ: ಹುಲ್ಲೂರು, ತಾಲ್ಲೂಕು-ಶಿಗ್ಗಾಂವ್, ಜಿಲ್ಲೆ-ಹಾವೇರಿ 581126. **ಜಾಮೀನುದಾರರು:** 1.ಶಾಂತವ್ವ ರುದ್ರಪ್ಪ ಶಿರಗುಪ್ಪಿ 2.ಮಹೇಶ ರುದ್ರಪ್ಪ ಶಿರಗುಪ್ಪಿ ವಾಸ: ಹುಲ್ಲೂರು, ತಾಲ್ಲೂಕು-ಶಿಗ್ಗಾಂವ್, ಜಿಲ್ಲೆ-ಹಾವೇರಿ 581126. 2.ಮೇ॥ ವೀರಭದ್ರೇಶ್ವರ ವಿತರಕರು / ಪಾನೀಯಗಳು ಮಾಲೀಕರು: 1.ಮಹೇಶ್ ರುದ್ರಪ್ಪ ಶಿರಗುಪ್ಪಿ ಜಾಮೀನುದಾರರು-1. ರುದ್ರಪ್ಪ ಪಕ್ಕೀರಪ್ಪ ಶಿರಗುಪ್ಪಿ 2.ಮಂಜುನಾಥ ರುದ್ರಪ್ಪ ಶಿರಗುಪ್ಪಿ 1. ಗೃಹ ಸಾಲ 2.ನಗದು ಕ್ರೆಡಿಟ್	**ಆಸ್ತಿ 01:** ಕೃಷಿಯೇತರ ಆಸ್ತಿಯ ಸಂಪೂರ್ಣ ಹೊಣೆಗಾರಿಕೆಯು ಹುಲ್ಲೂರು ಗ್ರಾಮ, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ-581126 ವ್ಯಾಪ್ತಿಯಲ್ಲಿದ್ದು, ಅದರ ವಿಪಿಸಿ ನಂ.1597, ಈ ಆಸ್ತಿ ನಂ. 151700702100102212 ಆಗಿದ್ದು, ಒಟ್ಟು ವಿಶಿಯಾ 135.21 ಚದರ ಮೀಟರ್, ರೆವಿನ್ಯೂ ದಾಖಲಾತಿ ಪ್ರಕಾರ ಆಗಿದ್ದು, ಜಾಗದ ವಿಶಿಯಾ 110.10 ಚದರ ಮೀಟರ್ ರೆವಿನ್ಯೂ ಡಿಪಾರ್ಟ್‌ಮೆಂಟ್ ಶಿಗ್ಗಾಂವ್ ಇದರ ಮಂಜೂರಾತಿ ದಾಖಲಾತಿ ಪ್ರಕಾರ ಆಗಿರುತ್ತದೆ. **ಚೆಕ್ಕುಬಂಧಿ:-** ಉತ್ತರ: ಪಂಚಾಯತ್ ರಸ್ತೆ. ದಕ್ಷಿಣ: ಪಂಚಾಯತ್ ರಸ್ತೆ. ಪೂರ್ವ: ಹಸನ್‌ಸಾಬ್ ಲಕ್ಷ್ಮೇಶ್ವರ ಅವರ ಮನೆ. ಪಶ್ಚಿಮ: ಪಂಚಾಯತ್ ರಸ್ತೆ. **ಆಸ್ತಿ 02:** ಕೃಷಿಯೇತರ ಆಸ್ತಿಯ ಸಂಪೂರ್ಣ ಹೊಣೆಗಾರಿಕೆಯು ಹುಲ್ಲೂರು ಗ್ರಾಮ, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ-581126 ವ್ಯಾಪ್ತಿಯಲ್ಲಿದ್ದು, ಅದರ ವಿಪಿಸಿ ನಂ.1596, ಈ ಆಸ್ತಿ ನಂ. 151700702100120920 ಆಗಿದ್ದು, ಒಟ್ಟು ವಿಶಿಯಾ 73.81 ಚದರ ಮೀಟರ್, **ಚೆಕ್ಕುಬಂಧಿ:-** ಉತ್ತರ: ಪಂಚಾಯತ್ ರಸ್ತೆ. ದಕ್ಷಿಣ: ರಾಜೇಸಾಬ್ ಪೈಲ್ವಾನ್ ಅವರ ಆಸ್ತಿ. ಪೂರ್ವ: ಹಿತ್ತಲ್ ಮನಿ ಅವರ ಆಸ್ತಿ. ಪಶ್ಚಿಮ: ವೀರಭದ್ರಪ್ಪ ಗುಂಜಾಳ್ ಅವರ ಮನೆ.	1. ರೂ. 4,86,692.60/- 2. ರೂ. 61,31,041.37/- ಒಟ್ಟು - ರೂ. 66,17,733.97/- (21.09.2026 ರವರೆಗಿನ ಒಟ್ಟು ಬಾಕಿ ಮೊತ್ತ; ಇದರ ಮೇಲೆ ಮುಂದಿನ ಬಡ್ಡಿ, ವೆಚ್ಚಗಳು ಹಾಗೂ ಇತರ ವೆಚ್ಚಗಳು ಅನ್ವಯಿಸುತ್ತವೆ).	30-10-2026 ಮಧ್ಯಾಹ್ನ 11.00 ಗಂಟೆಯಿಂದ ಮಧ್ಯಾಹ್ನ 2.00 ರವರೆಗೆ	ಆಸ್ತಿ 01 1) ರೂ. 30,68,010/- 2) ರೂ. 3,06,801/- 3) ರೂ. 25,000/- ಆಸ್ತಿ 02 1) ರೂ. 6,57,000/- 2) ರೂ. 6,700/- 3) ರೂ. 25,000/-	ಸಾಂಕೇತಿಕ ಸ್ವಾಧೀನ	24-09-2026 ರಿಂದ 28-10-2026 ರವರೆಗೆ ಬೆಳಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆ.

ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿ https://www.bankofbaroda.in/e-auction.htm ಹಾಗೂ https://baanknet.com ನಲ್ಲಿನ ಲಿಂಕ್ ಅನ್ನು ನೋಡಿ ಅಲ್ಲದೇ ಆಸಕ್ತಿಯುಳ್ಳ ಬಿಡ್ಡುದಾರರು. **ಶಾಖಾ ವ್ಯವಸ್ಥಾಪಕರು 6355924691.** ಗೆ ಸಹ ಕರೆ ಮಾಡಬಹುದು.

ಸ್ಥಳ: ಹುಲ್ಲೂರು ದಿನಾಂಕ: 24-09-2026
ಸಹಿ/- ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ

Scanned with OKEN Scanner